o.s. 183/2024
Dt:09.04.2026

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ದಿಃ 09.04.2026.

ಅಸಲು ದಾವಾ ನಂ. 183/2024

ಪಿ.ಡಬ್ಲ್ಯೂ-1

(ಮುಂದುವರಿದ ಪಾಟೀ ಸವಾಲು ಶ್ರೀ ಡಿ. ಆರ್. ವಕೀಲರಿಂದ ಪ್ರತಿವಾದಿಯ ಪರವಾಗಿ)

ವಿವಾಹವಾದ ನಂತರ ನಾನು 6 ವರ್ಷಗಳ ಕಾಲ ನನ್ನ ಗಂಡನ ಮನೆಯಲ್ಲಿಯೇ ಮರಿಯನಗರದಲ್ಲಿ ವಾಸವಾಗಿದ್ದೆವು. ನನ್ನ ಅತ್ತೆ ಮತ್ತು ಮಾವ ಮೃತರಾಗಿದ್ದರು. ದಾವೆ ಹೂಡಿರುವ ದಾವಾ ಆಸ್ತಿಯ ಸರ್ವೆ ನಂ. ಎಂದರೆ ಪಿ. 24/45. ನಮ್ಮ ಯಜಮಾನರ ಒಟ್ಟು ಕುಟುಂಬದ ಆಸ್ತಿ ಹೇಗೆ ಬಂದಿತು ಎಂದರೆ ನನ್ನ ಗಂಡನ ಮೂಲಕ ಬಂದಿರುತ್ತದೆ. ಈಗ ದಾವಾ ಸ್ವತ್ತು ಲಕ್ಷ್ಮಮ್ಮನ ಹೆಸರಿನಲ್ಲಿದೆ. ಪ್ರಸ್ತುತ 1ನೇ ಪ್ರತಿವಾದಿ ಪುಟ್ಟಮ್ಮ ನ ಹೆಸರಿನಲ್ಲಿ ಖಾತೆ ಬರುತ್ತಿದೆ. ಪುಟ್ಟಮ್ಮನಿಗೆ ಖಾತೆ ಹೇಗೆ ಬಂದಿತು ಎಂದರೆ ನನಗೆ ಗೊತ್ತಿಲ್ಲ. ನಾನು ವಕೀಲರ ಮೂಲಕ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಯಜಮಾನರು ಸಹಿ ಮಾಡುವುದನ್ನು ನಾನು ಗಮನಿಸಿರುವುದಿಲ್ಲ. ದಾವಸ್ವತ್ತು ನನ್ನ ಮಾವ ಹನುಮೇಗೌಡ, ಹಿರಿಯ ಹೆಂಡತಿಯ ಮಗ ಕೃಷ್ಣೇಗೌಡ ಮತ್ತು ಹನುಮೇಗೌಡರ ಹಿರಿಯ ಮಗಳಾದ ಗೌರಮ್ಮ ಮತ್ತು ವಾದಿಯ ಯಜಮಾನರಾದ ಸ್ವಾಮಿಗೌಡರವರು 1ನೇ ಪ್ರತಿವಾದಿ ಪುಟ್ಟ್ಮ ಮ್ಮ ನವರಿಗೆ 1982ರಲ್ಲಿ ನೋಟರಿ ಪ್ರಮಾಣಿತ ಜಿ .ಪಿ. ಎ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಬರೆದುಕೊಟ್ಟಿರುತ್ತಾರೆ ಆದರೆ ಸಾಲಕ್ಕಾಗಿ ಆದರೆ ಅದು ಕ್ರಯಕ್ಕೆ ಬರೆದುಕೊಟ್ಟಿರುವುದು ಎಂದು ನುಡಿಯುತ್ತಾರೆ. ಸದರಿ ಜಿ. ಪಿ. ಎ. ದಾಖಲಾತಿಯನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಸಾಕ್ಷಿಯು ಅದನ್ನು ನೋಡಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿ. ಪಿ.ಎ. ಆಧಾರದ ಮೇಲೆ 1ನೇ ಪ್ರತಿವಾದಿ ಪುಟ್ಟಮ್ಮ ನ ಹೆಸರಿಗೆ ಮ್ಯುಟೇಷನ್ ರಿಜಿಸ್ಟರ್ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಎಂ. ಆರ್. 86-87ರ ಸದರಿ ಮೇಲೆ ಹೇಳಿದ ವ್ಯಕ್ತಿಗಳು ಪುಟ್ಟಮ್ಮನ ಹೆಸರಿಗೆ ಮಾಡಿಕೊಟ್ಟಿರುವುದಾಗಿ ನಮೂದು ಇದೆ ಎಂದೆರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದಂತೆ ಸದರಿ

ವ್ಯಕ್ತಿಗಳು 1ನೇ ಪ್ರತಿವಾದಿ ಪುಟ್ಟಮ್ಮ ನ ಹೆಸರಿಗೆ 1982ರ ಜಿ.ಪಿ.ಎ. ಪ್ರಕಾರ ದಾವಾ ಆಸ್ತಿಯನ್ನು ಬರೆದುಕೊಟ್ಟಿರುವುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ಪ್ರಕಾರವಾಗಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಈ ಹಿಂದೆ ಸದರಿ ಜಿ. ಪಿ. ಎ. ಪತ್ರಕ್ಕೆ ಸಹಿ ಹಾಕಿರುವುದರಿಂದ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ವಿವಾಹವಾದ ಸಮಯದಲ್ಲಿ ನನ್ನ ಯಜಮಾನರಿಗೆ ಸುಮಾರು 25 ವರ್ಷ ವಯಸ್ಸಾಗಿತ್ತು. ನಾವು ವಿವಾಹವಾಗಿ ಸುಮಾರು 30 ವರ್ಷಗಳಾಯಿತು. ನಾನು ವಿವಾಹವಾಗುವ ಮುಂಚೆ ಜಿ.ಪಿ.ಎ. ಪತ್ರವನ್ನು ಪುಟ್ಟಮ್ಮನಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರಿಗೆ ಜಿ. ಪಿ. ಎ ಮಾಡಿರುವುದನ್ನು ಮರೆಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿವಾಹವಾಗುವ ಮುಂಚೆ ಜಿ.ಪಿ.ಎ. ಮಾಡಿಕೊಟ್ಟಿರುವುದರಿಂದ ನನಗೂ ಹಾಗೂ ನನ್ನ ಮಕ್ಕಳಿಗೆ ಸದರಿ ದಾವಾ ಆಸ್ತಿಯಲ್ಲಿ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು 1982ರಲ್ಲಿ ಜಮೀನನ್ನು ಮಾಡಿಸಿಕೊಂಡಿದ್ದು, ನಾನು 1981ರಲ್ಲಿ ವಿವಾಹ ವಾಗಿರುತ್ತೇನೆ ಎಂದು ನುಡಿಯುತ್ತಾರೆ.

ನನಗೆ ಇಬ್ಬರು ಮಕ್ಕಳಿದ್ದು, ಅವರುಗಳಿಗೆ 30 ಮತ್ತು 35 ವರ್ಷ ವಯಸ್ಸಾಗಿರುತ್ತದೆ. ನಾನು ವಿವಾಹ ಅದ 2 ವರ್ಷದ ನಂತರ ಮಕ್ಕಳಾಗಿರುತ್ತಾರೆ. ನಮ್ಮ ವಿವಾಹಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಮಕ್ಕಳ ಆಧಾರ್ ಕಾರ್ಡ್ ಮತ್ತು ಇತರೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆಯೇ ಎಂದರೆ ಇಲ್ಲ. ಸದರಿ ದಾಖಲಾತಿಗಳನ್ನು ನ್ಯಾ ಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿದ್ದಲ್ಲಿ, ಸತ್ಯಾಂಶ ತಿಳಿಯುತ್ತದೆ ಎಂಬ ಕಾರಣಕ್ಕಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ನೀಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ ಸುಮ ಟಿ.)
2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು